KADK610001472018

Presented on : 27-01-2018
Registered on : 05-02-2018
Decided on : 21-02-2025
Duration : Year/s Month/s Days
07 –- 25

## ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮೂಡಬಿದ್ರೆ

**ಉಪಸ್ಥಿತರುಃ- ಶ್ರೀಮತಿ ಕಾವೇರಮ್ಮ ಎಂ.,** *ಬಿ .ಎ ., ಎಲ್‌ಎಲ್ .ಬಿ .,*
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಮೂಡಬಿದ್ರೆ.

**ದಿನಾಂಕ 21 ನೇ ಫೆಬ್ರುವರಿ, 2025**

## C.C./113/2018

**ಫಿರ್ಯಾದಿಃ** ಮೂಡಬಿದ್ರೆ ಪೊಲೀಸ್ ಠಾಣೆ.

**(ಸಹಾಯಕ ಸರಕಾರಿ ಅಭಿಯೋಜಕರು)**

**-ವಿರುದ್ಧ-**

**ಆರೋಪಿಃ** ನಾಗರಾಜ್
ಪ್ರಾಯ ಸುಮಾರು 34 ವರ್ಷ,
ಬಿನ್ ಕುಪ್ಪ ಸ್ವಾಮಿ,
ವಾಸಃ ಪಿ.ವಿ.ಕಂಪೌಂಡ್,
ಸರಕಾರಿ ಶಾಲೆಯ ಬಳಿ,
ಹೊಸ್ಮಾರು, ಮಂಗಳೂರು ತಾಲೂಕು.

**(ಪ್ರತಿನಿಧಿಸಿದವರುಃ ಶ್ರೀ ಬಿ.ಮ್ಯಾಥ್ಯೂ ಮಸ್ಕರೇನಸ್, ವಕೀಲರು)**

1. ಅಪರಾಧ ನಡೆದ ದಿನಾಂಕ ಃ 05.12.2016
2. ಅಪರಾಧ ವರದಿಯಾದ ದಿನಾಂಕ ಃ 07.12.2016

| | | | |
|---|---|---|---|
| 3. | ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಿದ ದಿನಾಂಕ | : | 23.10.2019 |
| 4. | ಫಿರ್ಯಾದಿಯ ಹೆಸರು | : | ಶ್ರೀಮತಿ ಗೌರಿ |
| 5. | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | : | 12.02.2025 |
| 6. | ಸಾಕ್ಷಿ ವಿಚಾರಣೆ ಮುಕ್ತಾಯದ ದಿನಾಂಕ | : | 12.02.2025 |
| 7. | ಆರೋಪಿಸಲಾದ ಅಪರಾಧಗಳು | : | ಭಾರತೀಯ ದಂಡ ಸಂಹಿತೆ ಕಲಂ 323, 447, 504 ಮತ್ತು 506 |
| 8. | ನ್ಯಾಯಾಧೀಶರ ಅಭಿಪ್ರಾಯ | : | ಆರೋಪಿ ನಿರ್ದೋಷಿ |

KAVERAMMA M
Digitally signed by KAVERAMMA M
Date: 2025.02.27 11:42:35 +0530

**(ಕಾವೇರಮ್ಮ ಎಂ.)**
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಮೂಡಬಿದ್ರೆ

## -ತೀರ್ಪು-

ಆರೋಪಿಯ ವಿರುದ್ಧ ಮೂಡಬಿದ್ರೆ ಪೋಲೀಸ್ ಠಾಣೆಯ ಪೋಲೀಸ್ ಉಪನಿರೀಕ್ಷಕರು ದೋಷಾರೋಪಣೆ ಪತ್ರವನ್ನು ಸಲ್ಲಿಸಿ, ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 323, 447, 504 ಮತ್ತು 506 ರ ಅಪರಾಧಗಳ ಅಡಿಯಲ್ಲಿ ಕೃತ್ಯವೆಸಗಿದ್ದರೆಂದು ಆರೋಪಿಸಿರುತ್ತಾರೆ.

2. **ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ :-**

ಆರೋಪಿಯು ಈ ಮೊದಲು ಬಾಡಿಗೆಗೆ ನಡೆಸಲು ಪಡೆದುಕೊಂಡಿರುವ ಟ್ಯಾಕ್ಟರ್ ವಾಹನವನ್ನು ಚಾಸಾ-2 ನೇಯವರು ಅದರ ಮಾಲೀಕರಿಂದ ಪಡೆದುಕೊಂಡಿರುತ್ತಾರೆ ಎಂಬ ದ್ವೇಷದಿಂದ ದಿನಾಂಕ 05-12-2016 ರಂದು ರಾತ್ರಿ 11-30 ಗಂಟೆಗೆ ಮೂಡಬಿದ್ರೆ ಠಾಣಾ ವ್ಯಾಪ್ತಿಯ ಮಂಗಳೂರು ತಾಲ್ಲೂಕು ನೆಲ್ಲಿಕಾರು ಗ್ರಾಮದ ಡೆಂಜರ್ ಎಂಬಲ್ಲಿ ಚಾಸಾ-2 ನೇಯವರು ವಾಸವಾಗಿರುವ ಮನೆಗೆ ಬಂದು ಚಾಸಾ-2 ರವರಿಗೆ ಕೈಗಳಿಂದ ಹೊಡೆದು ಕಾಲಿನಿಂದ ತುಳಿದು ಹಲ್ಲೆ ಮಾಡಿರುವುದಲ್ಲದೆ ಅವಾಚ್ಯ ಶಬ್ದಗಳಿಂದ ಬೈದು ಕೊಲ್ಲದೆ ಬಿಡುವುದಿಲ್ಲವಾಗಿ ಜೀವ ಬೆದರಿಕೆ ಹಾಕಿರುವುದಾಗಿ ಆರೋಪಿಸಲಾಗಿದೆ.

3. ಈ ಘಟನೆಯ ಹಿನ್ನಲೆಯಲ್ಲಿ ಆರೋಪಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ತದನಂತರ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ, ಆರೋಪಿ ವಿರುದ್ಧ ಮಾಡಲಾಗಿರುವ ಅಪರಾಧಗಳ ಸಂಜ್ಞೆಯನ್ನು

ಪಡೆದು, ಆರೋಪಿಗೆ ಅಪರಾಧಿಕ ಪ್ರಕ್ರಿಯೆ ಸಂಹಿತೆ ಕಲಂ 207 ದೋಷಾರೋಪಣಾ ಪಟ್ಟಿಯ ಪ್ರತಿಯನ್ನು ನೀಡಿ, ಆರೋಪಿಯ ವಿರುದ್ಧ ದೋಷಾರೋಪಣೆಗಳನ್ನು ರಚಿಸಿ ಓದಿ ಹೇಳಿ ಅರ್ಥೈಸಿದ್ದು, ಆರೋಪಿ ಆಪಾದನೆಗಳನ್ನು ಅಲ್ಲಗಳೆದು ಪ್ರಕರಣವನ್ನು ವಿಚಾರಣೆ ಮಾಡಬೇಕೆಂದು ಪ್ರಾರ್ಥಿಸಿಕೊಂಡ ಕಾರಣ ಪ್ರಕರಣವನ್ನು ಸಾಕ್ಷಿದಾರರ ವಿಚಾರಣೆಗಾಗಿ ನಿಗಧಿಪಡಿಸಿ ಸಾಕ್ಷಿದಾರರಿಗೆ ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ಸಮನ್ಸ್ ಕಳುಹಿಸಲಾಯಿತು.

4. ಅಭಿಯೋಜನೆಯು ಆರೋಪಿಯ ವಿರುದ್ಧ ಮಾಡಲಾಗಿರುವ ಆರೋಪಗಳನ್ನು ಸಾಬೀತುಪಡಿಸಲು ದೋಷಾರೋಪಣಾ ಪತ್ರದಲ್ಲಿ ಒಟ್ಟು ಐದು ಸಾಕ್ಷಿದಾರರನ್ನು ತೋರಿಸಿದ್ದು, ಅವರಲ್ಲಿ ಒಬ್ಬರು ಸಾಕ್ಷಿದಾರರು ಪಿ.ಡಬ್ಲ್ಯೂ-1 ಎಂದು ವಿಚಾರಣೆಗೊಳಪಟ್ಟು ನಿಶಾನೆ ಪಿ-1 ಮತ್ತು ಪಿ-2 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

5. ಈ ಪ್ರಕರಣದ ವಿಚಾರಣೆ ಮುಗಿದ ನಂತರ ಆರೋಪಿಯ ವಿರುದ್ಧ ಯಾವುದೇ ದೋಷಾರೋಪಣೆಗಳು ಕಂಡುಬರದ ಕಾರಣ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯ ಆರೋಪಿಯ ಹೇಳಿಕೆಯನ್ನು ಕೈಬಿಡಲಾಯಿತು.

6. ಉಭಯ ಪಕ್ಷಗಳ ವಾದ-ವಿವಾದಗಳನ್ನು ಕೇಳಲಾಯಿತು.

7. ಮೇಲ್ಕಾಣಿಸಿದ ಸಂಗತಿಗಳನ್ನು ಪರಿಶೀಲಿಸಲಾಗಿ, ಈ ಕೆಳಕಾಣಿಸಿದ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುತ್ತವೆ:-

## ಅಂಶಗಳು

1) ದಿನಾಂಕ 05-12-2016 ರಂದು ರಾತ್ರಿ 11-30 ಗಂಟೆ ಸಮಯಕ್ಕೆ ಮೂಡಬಿದ್ರೆ ಠಾಣಾ ವ್ಯಾಪ್ತಿಯ ಮಂಗಳೂರು ತಾಲ್ಲೂಕು ನೆಲ್ಲಿಕಾರು ಗ್ರಾಮದ ಡೆಂಜರ್ ಎಂಬಲ್ಲಿ ಚಾಸಾ-2 ನೇಯವರು ವಾಸವಾಗಿರುವ ಮನೆಗೆ ಆರೋಪಿಯು ಅಕ್ರಮ ಪ್ರವೇಶ ಮಾಡಿರುವ ಕಾರಣ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 447 ರಡಿಯಲ್ಲಿ ದಂಡನೀಯವಾದ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸುತ್ತದೆಯೇ?

2) ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿಯು ಚಾಸಾ-2 ರವರಿಗೆ ಕೈಗಳಿಂದ ಹೊಡೆದು ಕಾಲಿನಿಂದ ತುಳಿದು ಹಲ್ಲೆ ಮಾಡಿರುವ ಕಾರಣ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 323 ರಡಿಯಲ್ಲಿ ದಂಡನೀಯವಾದ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸುತ್ತದೆಯೇ?

3) ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿಯು ಚಾಸಾ-2 ನೇಯವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುವ ಕಾರಣ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ

504 ರಡಿಯಲ್ಲಿ ದಂಡನೀಯವಾದ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸುತ್ತದೆಯೇ?

4) ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿಯು ಚಾಸಾ-2 ನೇಯವರನ್ನು ಉದ್ದೇಶಿಸಿ "ಪಾದೆಕಲ್ಲಿನ ಮಾಲೀಕರಿಗೆ ನಮ್ಮ ವಿರುದ್ಧ ಚಾಡಿ ಹೇಳುತ್ತೀಯಾ, ನಿನ್ನನ್ನು ಬದುಕಲು ಬಿಡುವುದಿಲ್ಲ" ಎಂಬುದಾಗಿ ಜೀವ ಬೆದರಿಕೆ ಹಾಕಿರುವ ಕಾರಣ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 506 ರಡಿಯಲ್ಲಿ ದಂಡನೀಯವಾದ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸುತ್ತದೆಯೇ?

5) ಹಾಗಿದ್ದರೆ ಯಾವ ಆಜ್ಞೆ?

8. ಮೇಲ್ಕಂಡ ಎರಡು ಕಡೆ ವಾದ-ವಿವಾದಗಳನ್ನು ಆಲಿಸಿದ ನಂತರ ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಿ, ಸಾಕ್ಷಿ ವಿಚಾರಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಮೇಲಿನ ಅಂಶಗಳಿಗೆ ಈ ನ್ಯಾಯಾಲಯದ ಉತ್ತರ ಈ ಕೆಳಕಂಡಂತೆ ಇದೆ.

1) ಅಂಶ ಸಂಖ್ಯೆ 1 ರಿಂದ 4 ಃ- **ನಕರಾತ್ಮಕವಾಗಿ**

2) ಅಂಶ ಸಂಖ್ಯೆ 5 ಃ-ಅಂತಿಮ ಆದೇಶದ ಮೇರೆಗೆ ಈ ಕೆಳಕಂಡ ಕಾರಣಗಳಿಗಾಗಿ;

## ಕಾ ರ ಣ ಗ ಳು

9. **ಅಂಶ ಸಂಖ್ಯೆ 1 ರಿಂದ 4** ಃ- ಈ ಎಲ್ಲಾ ಅಂಶಗಳು ಒಂದಕ್ಕೊಂದು ಆಂತರಿಕ ಸಂಬಂಧ ಹೊಂದಿರುವುದರಿಂದ ವಿಷಯದ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಸದರಿ ಅಂಶಗಳನ್ನು ಜೊತೆಗೂಡಿಸಿ ಒಟ್ಟಿಗೆ ಚರ್ಚಿಸಲಾಗಿದೆ.

10. ಆರೋಪಿಯ ವಿರುದ್ಧದ ಆರೋಪವನ್ನು ರುಜುವಾತು ಪಡಿಸುವ ಹಿನ್ನೆಲೆಯಲ್ಲಿ ಅಭಿಯೋಜನೆಯು ಚಾಸಾ-3 ರವರನ್ನು ವಿಚಾರಣೆ ಮಾಡಿ, ನಿಶಾನೆ ಪಿ-1 ಮತ್ತು ಪಿ-2 ದಾಖಲೆಗಳನ್ನು ಗುರುತಿಸಿಕೊಂಡಿದೆ.

11. ಈ ಪ್ರಕರಣದ ಪ್ರತ್ಯಕ್ಷದರ್ಶಿ ಮತ್ತು ಮಹಜರು ಸಾಕ್ಷಿದಾರರಾದ ಚಾಸಾ.3 ಸುಮತಿ ರವರನ್ನು ಪ್ರಾಸಾ.1 ಎಂದು ವಿಚಾರಣೆಗೆ ಒಳಪಡಿಸಿದಾಗ, ಇವರು ತಮ್ಮ ಮುಖ್ಯವಿಚಾರಣೆಯಲ್ಲಿ, ಚಾಸಾ-1, ಚಾಸಾ-2, ಚಾಸಾ-4 ಮತ್ತು ಆರೋಪಿ ಗೊತ್ತಿಲ್ಲ ಎಂದು, ಸ್ಥಳ ಮಹಜರ್ ನ್ನು ನಿಪಿ-1 ರಂತೆ ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನಿಪಿ-1(ಎ) ರಂತೆ ಗುರುತಿಸಿರುವುದಾಗಿ, ನಿಪಿ-1 ಕ್ಕೆ ಯಾವ ಕಾರಣಕ್ಕಾಗಿ ಸಹಿ ಮಾಡಿರುತ್ತೇನೆ ಎಂದು ಗೊತ್ತಿಲ್ಲ, ನಿಪಿ-1 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ, ನಿಪಿ-1 ಕ್ಕೆ ಪೊಲೀಸರ ಕೋರಿಕೆಯ ಮೇರೆಗೆ ಹಾಕಿರುತ್ತೇನೆ, ಈ ಪ್ರಕರಣದಲ್ಲಿ ಏನಾಗಿದೆ ಎಂದು ಗೊತ್ತಿಲ್ಲ, ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ, ಎಂದು ಸಾಕ್ಷ್ಯ ನುಡಿದಿರುತ್ತಾರೆ.

12. ಪ್ರಾಸಾ-1 ರವರು ಈ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿಯಾಗಿ ಸಾಕ್ಷ್ಯ ನುಡಿದಿರುವುದರಿಂದ ಅಭಿಯೋಜನೆಯು ಪ್ರಾಸಾ-1 ರವರನ್ನು ಪಾಟೀಸವಾಲಿಗೆ ಒಳಪಡಿಸಿದಾಗ ಪ್ರಾಸಾ-1 ರವರು ಪ್ರಕರಣಕ್ಕೆ ಪೂರಕವಾದ ಯಾವುದೇ ಸಂಗತಿಗಳನ್ನು ನುಡಿದಿರುವುದಿಲ್ಲ. ಆರೋಪಿ ಪರ ವಕೀಲರು ಪ್ರಾಸಾ-1 ರವರನ್ನು ಪಾಟೀಸವಾಲು ಮಾಡಿರುವುದಿಲ್ಲ.

13. ಪ್ರಕರಣದ ಕಡತವನ್ನು ಪರಿಶೀಲಿಸಿದಾಗ, ಚಾಸಾ-1 ಮತ್ತು ಚಾಸಾ-2 ರವರ ವಿರುದ್ಧ ನ್ಯಾಯಾಲಯವು ಸಮನ್ಸ್ ನ್ನು ಹೊರಡಿಸಿದರೂ ಸಹಿತ ಪೊಲೀಸರಿಗೆ ಚಾಸಾ-1 ಮತ್ತು ಚಾಸಾ-2 ರವರನ್ನು ಪತ್ತೆ ಹಚ್ಚಲು ಸಾಧ್ಯವಾಗದೆ ಇದ್ದ ಕಾರಣ ಚಾಸಾ-1 ಮತ್ತು ಚಾಸಾ-2 ರವರ ಸಾಕ್ಷ್ಯ ವಿಚಾರಣೆಯನ್ನು ನ್ಯಾಯಾಲಯವು ಕೈಬಿಟ್ಟಿರುತ್ತದೆ. ಈ ಪ್ರಕರಣದ ಪ್ರತ್ಯಕ್ಷದರ್ಶಿ ಮತ್ತು ಮಹಜರು ಸಾಕ್ಷಿದಾರರಾದ ಚಾಸಾ-3/ಪ್ರಾಸಾ-1 ರವರು ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿಯಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆದಕಾರಣ, ಇತರ ಸಾಕ್ಷಿದಾರರಿಗೆ ಸಮನ್ಸ್ ಕಳುಹಿಸಬೇಕೆಂಬ ಅಭಿಯೋಜನಾ ಪಕ್ಷದ ಪ್ರಾರ್ಥನೆಯನ್ನು ನ್ಯಾಯಾಲಯವು ತಿರಸ್ಕರಿಸಿರುತ್ತದೆ. ಮುಂದುವರೆದು, ಪ್ರಾಸಾ-1 ರವರ ಸಾಕ್ಷ್ಯವನ್ನು ಪರಿಶೀಲಿಸಿದಾಗ, ಎಲ್ಲಿಯೂ ಸಹ ಆರೋಪಿಯ ತಪ್ಪನ್ನು ತೋರಿಸಲು ಸಂಭವನೀಯತೆಯ ಒಂದು ಕಾರಣವು ಸಹ ಕಂಡುಬಂದಿರುವುದಿಲ್ಲ. ಆದ್ದರಿಂದ, ಆರೋಪಿಯ ವಿರುದ್ಧ ಮಾಡಲಾದ ಆಪಾದನೆಯನ್ನು ಅಭಿಯೋಜನೆಯು ಸಾಬೀತುಪಡಿಸುವಲ್ಲಿ ವಿಫಲವಾಗಿರುತ್ತದೆ. ಮೇಲ್ಕಂಡ ಸಾಕ್ಷ್ಯದಿಂದಾಗಿ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 323, 447, 504 ಮತ್ತು 506 ರಂತೆ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ಸಾಬೀತುಪಡಿಸುವಲ್ಲಿ ವಿಫಲವಾದ ಕಾರಣ ಆರೋಪಿಯ ವಿರುದ್ಧ ಆಪಾದಿಸಿದಂತಹ ಆರೋಪಗಳನ್ನು ನಿಸ್ಸಂದೇಹವಾಗಿ ಹಾಗೂ ಪೂರಕವಾದ ಸಾಕ್ಷ್ಯಾಧಾರಗಳೊಂದಿಗೆ ರುಜುವಾತು ಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆಯೆಂದು ಕಂಡು ಬಂದು ಸದರಿ ಸಂಶಯದ ಲಾಭವನ್ನು ಆರೋಪಿ ಪಡೆದು ಬಿಡುಗಡೆ ಹೊಂದಲು ಅರ್ಹರಿರುತ್ತಾರೆಂದು ಅಭಿಪ್ರಾಯಪಟ್ಟು ಮೇಲ್ಕಾಣಿಸಿದ **1 ರಿಂದ 4ನೇ ಅಂಶಗಳನ್ನು ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

14. **ಅಂಶ ಸಂಖ್ಯೆ 5** :- ಮೇಲ್ಕಾಣಿಸಿದ ಎಲ್ಲಾ ಕಾರಣಗಳಿಂದಾಗಿ ಈ ಕೆಳಕಾಣಿಸಿದಂತೆ ಆದೇಶಿಸಲಾಗಿದೆಃ

## -ಃಆದೇಶಃ-

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ಕಾರ್ಯೋನ್ಮುಖವಾಗಿ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 323, 447, 504 ಮತ್ತು 506 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗಾಗಿ ನಿರ್ದೋಷಿ ಎಂದು ಬಿಡುಗಡೆ ಮಾಡಲಾಗಿದೆ.

ಈ ಪ್ರಕರಣದಲ್ಲಿ ದಿನಾಂಕ **19.02.2025** ರಂದು ಆರೋಪಿ ಮತ್ತು ಅವರ ಜಾಮೀನುದಾರರ ದಂಡ ಪ್ರಕ್ರಿಯ ಸಂಹಿತೆ ಕಲಂ.**437**(ಎ)ರ ಅಡಿಯಲ್ಲಿ ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳು ಈ ತೀರ್ಪು ಹೊರಡಿಸಿದ ದಿನಾಂಕದಿಂದ ಮುಂದಿನ ಆರು ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ ಹಾಗೂ ಸದರಿ ಅವಧಿಯಲ್ಲಿ ಮೇಲ್ಮನವಿ ಪ್ರಾಧಿಕಾರದಿಂದ ಯಾವುದೇ ಸೂಚನೇ ಬರದೇ ಇದ್ದ ಪಕ್ಷದಲ್ಲಿ ಸದರಿ ಜಾಮೀನು ಮುಚ್ಚಳಿಕೆಗಳು ಸ್ವಯಂಚಾಲಿತವಾಗಿ ರದ್ದಾಗತಕ್ಕದ್ದು.

(*ಶೀಘ್ರಲಿಪಿಗಾರಳಿಗೆ ಉಕ್ತಲೇಖನ ನೀಡಿದ್ದು, ಆಕೆ ಗಣಕಯಂತ್ರ*ದಲ್ಲಿ ನೇರವಾಗಿ ಬೆರಳಚ್ಚು ಮಾಡಿದ್ದು, ತಪ್ಪುಗಳನ್ನು ತಿದ್ದುಪಡಿ ಮಾಡಿದ ನಂತರ ದಿನಾಂಕ **21** ನೇ ಫೆಬ್ರುವರಿ, **2025** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು )

KAVERAMMA M Digitally signed by KAVERAMMA M Date: 2025.02.27 11:42:46 +0530

**(ಕಾವೇರಮ್ಮ ಎಂ.)**
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಮೂಡಬಿದ್ರೆ

## -ಃ ಅ ನು ಬಂ ಧಃ-

<u>ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ ಃ-</u>

ಪ್ರಾಸಾ-1 ಃ ಸುಮತಿ

<u>ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-</u>

ನಿಪಿ.1 ಃ ತಕ್ಕೀರು ಸ್ಥಳದ ಮಹಜರು
ನಿಪಿ.1(ಎ) ಃ ಪ್ರಾಸಾ-1 ರವರ ಸಹಿ
ನಿಪಿ.2 ಃ ಪ್ರಾಸಾ-1 ರವರ ಹೇಳಿಕೆ

<u>ಆರೋಪಿಯ ಪರ ವಿಚಾರಣೆಯಾದ ಸಾಕ್ಷಿಗಳುಃ-</u>

-ಇಲ್ಲ-

<u>ಆರೋಪಿಯ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-</u>

-ಇಲ್ಲ-

<u>ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ಮುದ್ದೆ ಮಾಲುಗಳುಃ-</u>

-ಇಲ್ಲ-

KAVERAMMA M Digitally signed by KAVERAMMA M Date: 2025.02.27 11:42:52 +0530

ಸಿವಿಲ್ ನ್ಯಾಯಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಮೂಡಬಿದ್ರೆ